**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**CC No. 47/2025.**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಹನುಮಂತಪ್ಪ ಕಬ್ಬಾರ | | ***C.W-11*** |
| ತಂದೆಯ ಹೆಸರು | : ದೇವೇಂದ್ರಪ್ಪ | | ***P.W- 11*** |
| ವಯಸ್ಸು | : 40 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸ | : ಮಣಕೂರು . | | |

**ದಿನಾಂಕಃ 15-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನನಗೆ ಚಾಸಾ-1 ರವರ ಪರಿಚಯ ಇರುವುದಿಲ್ಲ. ನಾನು ಯಾವುದೆ ಜಗಳ ನೋಡಿಲ್ಲ ಗಲಾಟೆ ಬಿಡಿಸಲು ಪ್ರಯತ್ನ ಮಾಡಿಲ್ಲ ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ದಿನಾಂಕ 08-10-2024 ರಂದು ಮುಂಜಾನೆ 11.30 ಗಂಟೆಗೆ ನಾನು ಮತ್ತು ನನ್ನ ಪರಿಚಯದ ಪ್ರಭುಲಿಂಗಯ್ಯ ರುದ್ರಯ್ಯ ಕರ್ಜಗಿಮಠ ಇಬ್ಬರೂ ಸೇರಿಕೊಂಡು ಸ್ವಂತ ಕೆಲಸದ ಮೇಲೆ ಗಂಗಾಪುರಕ್ಕೆ ಹೊರಟಿದ್ದು ಆ ಕಾಲಕ್ಕೆ ನಾವು ಗಂಗಾಪುರ ರೈಲ್ವೆ ಗೇಟ್ ಹತ್ತಿರ ಇದ್ದಾಗ ರೈಲ್ವೆ ಗೇಟ್ ಸಮೀಪ ಬಾಯಿ ಶಬ್ದ ಕೇಳಿ ಅಲ್ಲಿಗೆ ನೋಡಿದಾಗ ಅಲ್ಲಿ ನಮ್ಮ ಪರಿಚಯದ ಬಾಬಣ್ಣ ಅಲಿಯಾಸ್ ಶಂಕ್ರಪ್ಪ ಕುರುವತ್ತೆಪ್ಪ ಕೊಪ್ಪದ ಅವರ ಮಗ ಚೇತನ ಹಾಗೂ ಅವರ ಟ್ರಾಕ್ಟರ್ ಡ್ರೈವರ್ ರವಿ ಬಸಪ್ಪ ಚಲವಾದಿ ಎಂಬುವವರು ಇದ್ದು ಅವರೆಲ್ಲರೂ ಸೇರಿಕೊಂಡು ಅವರ ಮುಂದೆ ನಿಂತಿದ್ದ ಶಿವನಗೌಡ ಸೋಮನಗೌಡ ಗೌಡರ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಮುಖ , ಮೈ ಕೈಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಆಗ ಶಿವನಗೌಡ ಅವರು ನೆಲಕ್ಕೆ ಬಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿತರು ಅವರನ್ನು ಬಿಟ್ಟು ಹೊರಟು

ಹೋದರು ಎಂದರೆ ಸರಿಯಲ್ಲ. ನಂತರ ನಾವು ಶಿವನಗೌಡರವರನ್ನು ಎಬ್ಬಿಸಿ ಉಪಚರಿಸಿ ಏಕೆ ಏನಾಯಿತು ಎಂದು ವಿಚಾರಿಸಲಾಗಿ ಬೆಳಗ್ಗೆ 11 ಗಂಟೆ ಸುಮಾರಿಗೆ ಅಂಗಡಿಯಲ್ಲಿದ್ದಾಗ ಬಾಬಣ್ಣ ಕೊಪ್ಪದ ಇವನು ತನ್ನೊಂದಿಗೆ ತನ್ನ ಮಗ ಮತ್ತು ಡ್ರೈವರ್ ನ್ನು ಕರೆದುಕೊಂಡು ಬಂದು ನಮ್ಮ ಅಂಗಡಿಗೆ ಬಂದು ನಿನ್ನ ಅಳಿಯ ನಾಗರಾಜ ಎಲ್ಲಿ ಎಂದು ವಿಚಾರಿಸಿದ್ದು ಅದಕ್ಕೆ ಅವರು ದಾವಣಗೆರೆಗೆ ಹೋಗಿದ್ದಾರೆ ಎಂದು ತಿಳಿಸಿದ್ದು ನಂತರ ಆರೋಪಿತರು ನೀನು ಜೂನ್ ತಿಂಗಳಿನಲ್ಲಿ ಕೊಟ್ಟ ಮೆಕ್ಕೆಜೋಳ ಬೀಜ ಫೇಲ್ ಆಗಿದೆ ಅಂತಾ ಹೇಳಿದ್ದು ಅದಕ್ಕೆ ನನ್ನ ಅಳಿಯ ದಾವಣೆಗೆರೆಯಿಂದ ಬಂದು ಸಂಜೆ ಮಾತನಾಡುತ್ತಾರೆ ಎಂದು ತಿಳಿಸಿದ್ದು ಅದಕ್ಕೆ ಆರೋಪಿತರು ನಿನ್ನ ಅಳಿಯ ಬರುವವರೆಗೂ ನಿನ್ನ ಮಾವನನನ್ನು ಎತ್ತಿ ಹಾಕಿಕೊಂಡು ಹೋಗುತ್ತೇವೆ ಎಂದು ಫೋನ್ ಕಟ್ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಅಂಗಡಿಯಲ್ಲಿದ್ದ ಒಂದು ಕೀಲಿಯನ್ನು ತೆಗೆದುಕೊಂಡು ಅಂಗಡಿಯ ಶೆಟರ್ಸ ಎಳೆದು ಕೀಲಿ ಹಾಕಿ ಅವರನ್ನು ಒತ್ತಾಯ ಪೂರ್ವಕವಾಗಿ ಸ್ಕೂಟಿಯಲ್ಲಿ ಹತ್ತಿಸಿಕೊಂಡು ಈ ಜಾಗಕ್ಕೆ ಕರೆದುಕೊಂಡು ಬಂದು ನನಗೆ ಹಲ್ಲೆ ಮಾಡಿರುತ್ತಾರೆ ಎಂದು ಶಿವನಗೌಡ ನಮಗೆ ತಿಳಿಸಿದ್ದ ಎಂದರೆ ಸರಿಯಲ್ಲ. ನಂತರ ಅವರಿಗೆ ಒಂದು ಆಟೋದಲ್ಲಿ ಹತ್ತಿಸಿ ಮನೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಸರ್ಕಾರಿ ರಾಣೇಬೆನ್ನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ದಾಖಲಾಗಿ ಡಿಸ್ಚಾರ್ಜ ಆದ ನಂತರ ಈ ಬಗ್ಗೆ ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ 11-11-2024 ರಂದು ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿ ನಿರಾಕರಿಸಿದ್ದರಿಂದ ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಈ ಕೇಸಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.